# ಶ್ರೀ ಶ್ರೀಶ್ರೀ 1008 ಶ್ರೀವಿಷ್ಣುಪ್ರಿಯತೀರ್ಥ ಶ್ರೀಪಾದಂಗಳವರ ಚರಿತ್ರೆ

**(ಕ್ರೀ.ಶ.1806–1816)**

**ನಿಖಿಲಾಗಮವಿಜ್ಞೇಯಂ ವಿಷ್ಣುಂಭಕ್ತ್ಯಾ ಸದಾರ್ಚಕಮ್ ।**
**ವಿಷ್ಣುಪ್ರಿಯೇತಿ ವಿಖ್ಯಾತಂ ವಂದೇಭೀಷ್ಟಪ್ರದಾಯಕಮ್ ॥**

ಶ್ರೀ ಗುರುಭ್ಯೋನಮಃ. ಶ್ರೀಮನ್ ಮಾಧವತೀರ್ಥ ಶ್ರೀಪಾದಂಗಳಿಂದ ಆರಂಭಗೊಂಡ ಶ್ರೀಮತ್ ಕಣ್ವಮಠವು ಇಲ್ಲಿಯವರೆಗೆ 12 ಜನ ಪೀಠಾಧಿಪತಿಗಳನ್ನು ಹಾಗೂ ಮೂರು ಜನ ಮೋಕ್ಷಾರ್ಥಿ ಯತಿಗಳನ್ನೊಳಗೊಂಡ ಪೀಠವಾಗಿದೆ. ಶ್ರೀ ಶುಕ್ಲಯಜುರ್ವೇದದ ಸಾರವನ್ನು ಭಾರತಾದ್ಯಂತ ಇರುವ ಸಮಸ್ತ ಶುಕ್ಲ ಯಜುರ್ವೇದ ಕಣ್ವ ಮತ್ತು ಮಾಧ್ಯಂದಿನ ಶಾಖೆಯವರಿಗೆ ತಿಳಿಸಲು ಕಂಕಣಬದ್ಧರಾಗಿ ಶ್ರೀಮನ್ ಮಾಧವತೀರ್ಥರು ಶ್ರೀ ಕಣ್ವ ಮಠವನ್ನು, ಉಡುಪಿಯ ಶೀರೂರು ಮಠದಿಂದ ಸನ್ಯಾಸದೀಕ್ಷೆ ಪಡೆದು ಪ್ರಾರಂಭಿಸಿದ್ದು ತಮಗೆಲ್ಲ ತಿಳಿದ ವಿಷಯ.

ಸುರಪುರದ ಶ್ರೀ ವೆಂಕಟೇಶಾಚಾರ್ಯರು ಶಿರೂರು ಮಠಾಧೀಶರಾಗಿದ್ದ ಶ್ರೀ ಲಕ್ಷ್ಮೀ ಮನೋಹರ ತೀರ್ಥರಿಂದ ಸನ್ಯಾಸ ಗ್ರಹಣ ಮಾಡಿದರು. ಶ್ರೀಮನ್ ಮಾಧವತೀರ್ಥರೆಂಬ ಹೆಸರು ಪಡೆದು ಕರ್ನಾಟಕದಾದ್ಯಂತ ಎಲ್ಲ ಶ್ರೀ ಶುಕ್ಲ ಯಜುರ್ವೇದಿಗಳನ್ನು ಒಂದುಗೂಡಿಸುವ ಪ್ರಯತ್ನ ಕೈಗೊಂಡರು. ಕೃಷ್ಣಾ ನದಿ ತೀರದಲ್ಲಿದ್ದ ವೀರಘಟ್ಟ ಪ್ರದೇಶವನ್ನು ಸುರಪುರದ ಅರಸರಿಂದ ಪಡೆದು ತಮ್ಮ ಹೆಚ್ಚಿನ ಕಾಲ ಅಲ್ಲಿಯೇ ಕಳೆಯುತ್ತಿದ್ದರು. ಶ್ರೀಗಳ ಆರೋಗ್ಯ ಬಿಗಡಾಯಿಸುತ್ತಿದ್ದುದರಿಂದ ಅವರು ತಮ್ಮ ಉತ್ತರಾಧಿಕಾರಿಗಳ ಅನ್ವೇಷಣೆಯಲ್ಲಿ ಇದ್ದರು.

ಶ್ರೀಮನ್ ಮಾಧವತೀರ್ಥರು ಮೂಲತಃ ಸುರಪೂರ ಸಂಸ್ಥಾನ ದವರಾಗಿದ್ದು. ಆ ಕಾಲದಲ್ಲಿ ಸುರಪುರ ಸಂಸ್ಥಾನವು ಅನೇಕ ವಿದ್ವಾಂಸರಿಂದ ಕೂಡಿದ ಒಂದು ಶ್ರೇಷ್ಠ ಸಂಸ್ಥಾನವಾಗಿತ್ತು. ತಿರುಪತಿಯಿಂದ ಬಂದಿದ್ದ ಅನೇಕ ಶ್ರೀವೈಷ್ಣವ ವಿದ್ವಾಂಸರೂ, ಅದ್ವೈತ ಮತದ ಶಾಸ್ತ್ರಿಗಳು, ರಾಜಪುರೋಹಿತರು, ಅಗ್ನಿಹೋತ್ರಿಗಳು, ಮುಜುಮದಾರರು, ಜಹಾಗೀರದಾರರು ಹಾಗೂ ಜ್ಯೋತಿಷ್ಯ ಶಾಸ್ತ್ರ ನಿಪುಣರು ಆಸ್ಥಾನದಲ್ಲಿದ್ದರು.

ಅದ್ವೈತಿಗಳು ಹಾಗೂ ಶ್ರೀವೈಷ್ಣವ ಪಂಥದವರನ್ನು ಹೊರತುಪಡಿಸಿದರೆ ಉಳಿದೆಲ್ಲ ಮನೆತನಗಳು, ಶುಕ್ಲ ಯುಜುರ್ವೇದಿ ಕಣ್ವಶಾಖೀಯರೇ ಹೆಚ್ಚು ಸಂಖ್ಯೆಯಲ್ಲಿದ್ದರು. ಮುಜಮದಾರರು, ರಾಜಪುರೋಹಿತರೂ, ಅಗ್ನಿಹೋತ್ರಿಗಳು ಹಾಗೂ ವೇದ ವಿದ್ವಾಂಸ ಪಂಡಿತರೆಲ್ಲರೂ ಕಣ್ವ ಶಾಖೀಯರಾಗಿದ್ದರು. ಇದೇ ಕಾಲಕ್ಕೆ ಕಾಶ್ಯಪ ಗೋತ್ರದ ಪಂಡಿತರೂ ಧರ್ಮಶಾಸ್ತ್ರ ಹಾಗೂ ಜ್ಯೋತಿಷ್ಯ ಶಾಸ್ತ್ರದ ನಿಪುಣರಾಗಿದ್ದ ಶ್ರೀ ಶ್ರೀನಿವಾಸಾಚಾರ್ಯ ಕನಕಗಿರಿ ಎಂಬ ವಿದ್ವಾಂಸರು ಶ್ರೀ ಮಾಧವತೀರ್ಥರ ಆಧ್ಯಾತ್ಮ ದೃಷ್ಟಿಗೆ ಗೋಚರರಾದರು. ಕನಕಗಿರಿ ಶ್ರೀನಿವಾಸಾಚಾರ್ಯರು ತಮ್ಮ ಇಳಿ ವಯಸ್ಸಿನಲ್ಲಿ ಸಂಸಾರಿಕ ಜೀವನದಿಂದ ಮುಕ್ತಿ

ಪಡೆದು ಸನ್ಯಾಸ ದೀಕ್ಷೆ ಪಡೆಯಲು ಇಚ್ಛೆಪಟ್ಟಿದ್ದರು. ಪಂಡಿತೋತ್ತಮರಾಗಿದ್ದ ಶ್ರೀನಿವಾಸಾಚಾರ್ಯರು, ಉತ್ತಮ ವೈದಿಕ ವೃತ್ತಿಯಿಂದ, ರಾಜಮನ್ನಣೆ ಗಳಿಸಿ, ಸುರಪುರದ ಹತ್ತಿರದ ಸೂಗೂರು ಎಂಬ ಗ್ರಾಮದಲ್ಲಿ ರಾಜರಿಂದ ಸುಮಾರು 60 ಎಕರೆ ಭೂಮಿಯನ್ನು ದಾನದ ರೂಪದಲ್ಲಿ ಪಡೆದಿದ್ದರು. ಯೋಗಾಯೋಗವೆಂಬಂತೆ ಸುರಪುರಕ್ಕೆ ಆಗಮಿಸಿದ್ದ ಶ್ರೀ ಮಾಧವತೀರ್ಥರಲ್ಲಿ ತಮ್ಮ ಇಚ್ಛೆ ವ್ಯಕ್ತಪಡಿಸಿದರು. ತಮ್ಮ ಉತ್ತರಾಧಿಕಾರಿ ಸಂಶೋಧನೆಯಲ್ಲಿದ್ದ ಶ್ರೀಗಳಿಗೆ ಈ ವಿಷಯ ತಿಳಿದು ಮಹದಾನಂದವಾಯಿತು. ಮುಂದೆ ಕೆಲದಿನಗಳಲ್ಲಿ ಶ್ರೀಮಾಧವತೀರ್ಥ ಶ್ರೀಪಾದಂಗಳವರು ಶ್ರೀ ವಿಠ್ಠಲಕೃಷ್ಣನ ಆದೇಶ ಪಡೆದು ಶ್ರೀ ಶ್ರೀನಿವಾಸಾಚಾರ್ಯರಿಗೆ ಶ್ರೀಮಠಕ್ಕೆ ಬರಲು ಆಹ್ವಾನವನ್ನು ತಮ್ಮ ಶಿಷ್ಯರ ಮೂಲಕ ಆದೇಶ ಕಳಿಸುತ್ತಾರೆ.

ಅದರಂತೆ ವೀರಘಟ್ಟಕ್ಕೆ ಬಂದ ಶ್ರೀನಿವಾಸಾಚಾರ್ಯ ಕನಕಗಿರಿ ಅವರು ಶ್ರೀಗಳಲ್ಲಿ ತಮ್ಮ ಬೇಡಿಕೆಯನ್ನು ಇಡುತ್ತಾರೆ. ಅದೇನೆಂದರೆ, ತಮಗೆ ಕೇವಲ ಮೋಕ್ಷಾರ್ಥಿಗಳಾಗಿ ಸಂನ್ಯಾಸದೀಕ್ಷೆ ಮಾತ್ರ ನೀಡಬೇಕು ಹಾಗೂ ಮಠದ ಉತ್ತರಾಧಿಕಾರಿಯನ್ನಾಗಿಸಕೂಡದು ಎಂದು ನಿವೇದನೆ ಮಾಡುತ್ತಾರೆ. ಶ್ರೀಪಾದಂಗಳು ಮತ್ತೆ ಚಿಂತಾಕ್ರಾಂತರಾಗಿ, ಎರಡು ದಿನಗಳ ಕಾಲ ಸಮಯ ತೆಗೆದುಕೊಂಡು, ಮುಂದಿನ ಪೀಠಾಧಿಪತಿಗಳು ಸಿಗುವವರೆಗೆ, ತಮ್ಮ ಜೊತೆಯಲ್ಲಿ ಮಠದಲ್ಲಿದ್ದು, ಪೀಠಾಧಿಪತಿಗಳು ಸಿಕ್ಕಮೇಲೆ ಬಿಡಿ ಸನ್ಯಾಸಿಗಳಾಗಿ ತೆರಳಲು ಆದೇಶಿಸುತ್ತಾರೆ. ಈ ಷರತ್ತನ್ನು ಒಪ್ಪಿಕೊಂಡು ಶ್ರೀ ಶ್ರೀನಿವಾಸಾಚಾರ್ಯ ಕನಕಗಿರಿ ಅವರು ಶ್ರೀಗಳಿಂದ ಸನ್ಯಾಸ ದೀಕ್ಷೆಯನ್ನು ಪಡೆದು ಶ್ರೀಗಳಿಂದ "ಶ್ರೀ ವಿಷ್ಣುಪ್ರೀಯತೀರ್ಥ"ರೆಂದು ನಾಮಧೇಯ ಪಡೆಯುತ್ತಾರೆ.

ಸನ್ 1806 ರಲ್ಲಿ ಶಾಲಿವಾಹನ ಶಕೆ 1728 ಕ್ಷಯನಾಮ ಸಂವತ್ಸರದಲ್ಲಿ "ಶ್ರೀ ವಿಷ್ಣುಪ್ರೀಯತೀರ್ಥ"ರು ಸನ್ಯಾಸ ದೀಕ್ಷೆಯನ್ನು ವೀರಘಟ್ಟ ಸಂಸ್ಥಾನದಲ್ಲಿ ಪಡೆಯುತ್ತಾರೆ. ಮುಂದೆ ಶ್ರೀ ಮಾಧವತೀರ್ಥರು ಶಾಲಿವಾಹನ ಶಕೆ 1731 ಚೈತ್ರ ಶುಕ್ಲ ತೃತಿಯಾದಂದು (ಸನ್ 1809) ಶ್ರೀ ಅಕ್ಷೋಭ್ಯತೀರ್ಥರಿಗೆ ಆಶ್ರಮವಿತ್ತು ಪೀಠಾಧಿಪತಿಗಳನ್ನಾಗಿ ಮಾಡಿ ಯತ್ಯಾಶ್ರಮ ನೀಡಿದ ನಂತರ ಶ್ರೀ ವಿಷ್ಣುಪ್ರೀಯತೀರ್ಥರು ವೀರಘಟ್ಟದಿಂದ ಹೊರಬಂದು ತಮ್ಮ ಸಂಚಾರಿಯಾತ್ರೆ ಆರಂಭಿಸಿದರು.

ಶ್ರೀ ವಿಷ್ಣುಪ್ರಿಯತೀರ್ಥರ ಪೂರ್ವಾಶ್ರಮ, ಬಾಲ್ಯ ಹಾಗೂ ವೈವಾಹಿಕ ಜೀವನದ ವಿವರಗಳು ಸಿಗುತ್ತಿಲ್ಲ. ಪೂರ್ವಾಶ್ರಮದಲ್ಲಿ ಪ್ರಕಾಂಡ ಪಂಡಿತರಾಗಿದ್ದ ಇವರಿಗೆ, ಸುರಪುರದ ರಾಜಮನೆತನದಿಂದ ಸೂಗೂರು ಗ್ರಾಮದಲ್ಲಿ ಜಹಗೀರು ಭೂಮಿ ಸಿಕ್ಕಿದ್ದು ದಾಖಲೆಗಳಿವೆ. ಪೂರ್ವಾಶ್ರಮದಲ್ಲಿ ಇವರು ಜ್ಯೋತಿಷ್ಯ ಶಾಸ್ತ್ರಗಳಲ್ಲಿ ಪಾರಂಗತರಾಗಿದ್ದುದು ತಿಳಿದುಬಂದಿದೆ. ಇವರ ವೈವಾಹಿಕ ಜೀವನದಲ್ಲಿ ಇಬ್ಬರು ಪುತ್ರರಿದ್ದು ಅವರೂ ಕೂಡಾ ಜ್ಯೋತಿಷ್ಯ ಹಾಗೂ ಪುರಾಣ, ವೈದಿಕ ಶಾಸ್ತ್ರಗಳಲ್ಲಿ ಪಾರಂಗತರಾಗಿದ್ದರು. ಇತ್ತೀಚೆಗೆ ಇವರ ನೇರ ಸಂತತಿಯಾಗಿದ್ದ ಸುರಪುರದ ಶ್ರೀ ಕೃಷ್ಣಾಚಾರ್ಯ (ಪದ್ಯದ) ಕನಕಗಿರಿ ಅವರು 1981 ರಲ್ಲಿ ತಮ್ಮ ಸೂಗೂರಿನ

ಭೂಮಿಯನ್ನು ಮಾರಾಟ ಮಾಡಿದ ಮೇಲೆ ಸುರಪುರದ ತಹಸೀಲ್‌ನಲ್ಲಿ ಇವರ ಕೆಲವು ವಿವರಗಳು ಸಿಕ್ಕಿವೆ. ಶ್ರೀ ಕೃಷ್ಣಾಚಾರ್ಯರ ಸಂತತಿ ಈಗ ಯಾರೂ ಇಲ್ಲ.

ಸುರಪೂರದಲ್ಲಿ ಇರುವ ಇವರ ಮನೆತನವು ವೇದಾಧ್ಯಯನ ಹಾಗೂ ಅಧ್ಯಾಪನದ ಕೇಂದ್ರವಾಗಿತ್ತು. ಈ ಮನೆತನದ ಪಂಡಿತರು, ವೈದಿಕ, ಜ್ಯೋತಿಷ್ಯ ಹಾಗೂ ಶಾಸ್ತ್ರಾಧ್ಯಯನದಲ್ಲಿ ಪಾರಂಗತರಾಗಿದ್ದು. ಇವರ ಮನೆತನದವರೇ ಮುಂದೆ ಶ್ರೀ ವಿದ್ಯಾಸಂಪೂರ್ಣತೀರ್ಥರು (ಗೋರಲೋಟಿ) ಹಾಗೂ ಶ್ರೀ ವಿದ್ಯಾವಿರಾಜತೀರ್ಥರು (ಕಾಮಲಾಪೂರ) ಕಣ್ವಮಠಾಧೀಶರಾಗಿದ್ದು, ಈ ಮನೆತನದ ಪಾಂಡಿತ್ಯಕ್ಕೆ ಸಾಕ್ಷಿಯಾಗಿದೆ. ಶ್ರೀ ವಿಷ್ಣುಪ್ರಿಯತೀರ್ಥರು ತಮ್ಮ ಬಾಲ್ಯದಲ್ಲಿ ತಮ್ಮ ಪೂರ್ವಾಶ್ರಮದ ತಂದೆಯವರಲ್ಲಿ ವೇದಾಧ್ಯಯನ ಮಾಡಿ ವೈದಿಕ, ಪುರಾಣ ಹಾಗೂ ಜ್ಯೋತಿಷ್ಯ ಶಾಸ್ತ್ರಗಳಲ್ಲಿ ಪಾರಂಗತರಾದ್ದರು. (ಅವರ ನೇರ ಸಂತತಿಯಲ್ಲಿ ಇದ್ದ ಶ್ರೀ ಕೃಷ್ಣಾಚಾರ್ಯ ಕನಕಗಿರಿ ಅವರು ತಿಳಿಸಿದ್ದಾರೆ.)

ಶ್ರೀ ವಿಷ್ಣುಪ್ರಿಯತೀರ್ಥರು ಶ್ರೀಮಠದ ಆಡಳಿತದಿಂದ ದೂರವಾದ ಮೇಲೆ ತಮ್ಮ ಸಂಚಾರದಲ್ಲಿ ಅವರು ಸುರಪುರ, ಶಹಾಪುರ, ಸನ್ನತಿ, ಯಾದಗಿರಿ ಹಾಗೂ ಲಿಂಗಸೂಗೂರು, ತಾಲೂಕಿನ ಹಳ್ಳಿಗಳಲ್ಲಿ ಸಂಚರಿಸಿದರು. ಇವರ ಜ್ಯೋತಿಷ್ಯ ಪಾಂಡಿತ್ಯದಿಂದ ಬೇಡರು, ಮಾರವಾಡಿಗಳು, ಕುರುಬರು ಹಾಗೂ ಇತರ ವರ್ಗದವರು ಇವರನ್ನು ಹೆಚ್ಚು ಆದರಿಸಿ ಸತ್ಕರಿಸಿದ ವಿಷಯಗಳನ್ನು ಜನರು ತಿಳಿಸುತ್ತಾರೆ. ಜನರಲ್ಲಿ ಆಧ್ಯಾತ್ಮ ಸಾಧನೆ, ಭಗವಂತನಲ್ಲಿ ಶ್ರದ್ಧೆ, ಭಕ್ತಿ ಮೂಡುವಂತೆ ತಮ್ಮ ಉಪದೇಶದಲ್ಲಿ ತಿಳಿಸುತ್ತಿದ್ದರು. ಶ್ರೀ ವಿಷ್ಣುಪ್ರಿಯತೀರ್ಥರು ತಮ್ಮ ಜೀವಿತಾವಧಿಯಲ್ಲಿ ಯಾರಿಗೂ ಯತ್ಯಾಶ್ರಮವನ್ನು ನೀಡಲಿಲ್ಲ ಎಂದು ತಿಳಿದುಬಂದಿದೆ. ಹತ್ತು ವರ್ಷಗಳ ಕಾಲ ನಮ್ಮ ಶ್ರೀ ಕಣ್ವಮಠದ ಮೋಕ್ಷಾರ್ಥಿ ಸನ್ಯಾಸಿಗಳಾಗಿ ಸೇವೆಗೈದು ಸುರಪೂರ ತಾಲೂಕಾ ಕೇಂದ್ರದಿಂದ 15 ಕಿ.ಮೀ. ದೂರದ ತಮ್ಮ ಜಹಗೀರು ಪ್ರದೇಶ ಸೂಗೂರು ಗ್ರಾಮದಲ್ಲಿ ವೃಂದಾವನಸ್ಥರಾಗಿದ್ದಾರೆ.

ಶ್ರೀ ವಿಷ್ಣುಪ್ರಿಯತೀರ್ಥರು ಕಾಲವಾಗಿದ್ದು ಕ್ರಿ.ಶ.1816 ಧಾತೃನಾಮ ಸಂವತ್ಸರ ಶಾಲಿವಾಹನ ಶಕೆ 1738 ಕಾರ್ತೀಕ ಶುದ್ಧ ಪ್ರತಿಪದೆಯಂದು. ಅಂದು ಸಕಲರಿಗೂ ದೀಪಾವಳಿಯ ಹಬ್ಬವಾದ್ದರಿಂದ ಪ್ರತಿ ವರ್ಷ ಆರಾಧನೆಯನ್ನು ಕಾರ್ತೀಕ ಶುದ್ಧ ಪಂಚಮಿಯಂದು ಶ್ರೀ ವಿದ್ಯಾಭಾಸ್ಕರತೀರ್ಥರ ಆದೇಶದ ಮೇರೆಗೆ ಆಚರಿಸಲಾಗುತ್ತಿದೆ. ಸೂಗೂರು ಗ್ರಾಮದಲ್ಲಿ ಕೇವಲ ಎರಡು ವಿಪ್ರ ಸಮಾಜದ ಮನೆತನಗಳು ಇದ್ದವು, (1) ದೇಶಪಾಂಡೆ ಮನೆತನ ಮತ್ತು (2) ಕುಲಕರ್ಣಿಯವರ ಮನೆತನ. ಹಿಂದೆ ಶ್ರೀ ಹಾಲಭಾವಿ ಕುಪ್ಪೇರಾಯರು ತಮ್ಮದೇ ಖರ್ಚುವೆಚ್ಚದಲ್ಲಿ ಆರಾಧನೆಯ ಎಲ್ಲ ಕಾರ್ಯಗಳನ್ನು ನೆರವೇರಿಸುತ್ತಿದ್ದು ನಂತರ ಶ್ರೀ ಹಣಮಂತರಾವ ಕುಲಕರ್ಣಿ ಅವರೂ ಕೂಡಾ ತಮ್ಮ ಸ್ವಂತ ವೆಚ್ಚದಲ್ಲಿ ಆರಾಧನೆ ನಡೆಸುತ್ತಿದ್ದರು. ಈಗ ಒಂದು ಕಮೀಟಿ ಸ್ಥಾಪನೆಯಾಗಿದ್ದು ಶ್ರೀಯುತ ಗೋವಿಂದರಾವ್ ಕುಲಕರ್ಣಿ ಹಾಗೂ ಶ್ರೀ ರಾಮರಾವ ಕುಲಕರ್ಣಿ ಅವರು ಸಕಲ ಸದ್ಭಕ್ತರ ನೆರವಿನಿಂದ ಆರಾಧನಾ ಕಾರ್ಯ ನಡೆಸುತ್ತಲಿದ್ದಾರೆ. ಶ್ರೀ ವಿಷ್ಣುಪ್ರಿಯತೀರ್ಥರ ಪೂರ್ವಾಶ್ರಮದ ನೇರ ಸಂತತಿಗಳಲ್ಲಿ ಶ್ರೀ

ಕೃಷ್ಣಾಚಾರ್ಯ ಪದ್ಯದ ಕನಕಗಿರಿ ಅವರು ತಮ್ಮ ಪೂರ್ವಜರ ಎಲ್ಲ ಮಾಹಿತಿಗಳನ್ನು ಸಂಗ್ರಹಿಸಿದ್ದರು. ಆದರೆ ದುರ್ದೈವದಿಂದ ಎಲ್ಲ ಮಾಹಿತಿಗಳು ನಾಶವಾಗಿವೆ. ಸಂಶೋಧಕರಿಗೆ ಕೇವಲ ಅವರ ಒಡನಾಡಿಗಳ ಹೇಳಿಕೆಗಳೇ ಪ್ರಮುಖ ದಾಖಲೆಗಳಾಗಿವೆ.

ಶ್ರೀಗಳ ವೃಂದಾವನವು ಅತ್ಯಂತ ಮನಮೋಹಕವಾಗಿದ್ದು, ಭಕ್ತರಿಗೆ ಪುಣ್ಯಕ್ಷೇತ್ರವಾಗಿದೆ. ಸುರಪುರದ ಅರಸರಿಂದ ನೀಡಲ್ಪಟ್ಟ ಒಂದು ಜಮೀನಿನಲ್ಲಿ ಪುರಾತನ ಶ್ರೀ ಆಂಜನೇಯ ದೇವಸ್ಥಾನವಿದೆ. ಈ ದೇವಸ್ಥಾನದಿಂದ ಹೊರಗಡೆ ಕೆಲವೇ ಅಡಿಗಳಲ್ಲಿ ಶ್ರೀ ವಿಷ್ಣುಪ್ರಿಯತೀರ್ಥರ ವೃಂದಾವನ ಶ್ರೀ ಆಂಜನೇಯ ದೇವಸ್ಥಾನದ ಸ್ಥಳವು ಸುರಪೂರ ಅರಸರಿಂದ ನೀಡಲ್ಪಟ್ಟಿದ್ದು ಎಂದು ದಾಖಲೆಗಳು ತೋರಿಸುತ್ತವೆ.

ಈ ಲೇಖನವನ್ನು ಸಿದ್ಧಪಡಿಸಲು ಸಹಕರಿಸಿದ ಶ್ರೀ ಶ್ರೀಹರಿರಾವ ಆದೋನಿ, ಶ್ರೀ ಗುಂಡುರಾವ ಹಾಗೂ ಶ್ರೀ ರಾಮಚಂದ್ರ ಕುಲಕರ್ಣಿ ಸೂಗೂರು, ಶ್ರೀ ರಾಮರಾವ ಹಾಗೂ ಶ್ರೀ ಗೋವಿಂದರಾವ ಸೂಗೂರು ಇವರಿಗೆ ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಸದ್ಯ ಶ್ರೀ ಗೋವಿಂದರಾವ್ ಕುಲಕರ್ಣಿ ಹಾಗೂ ಶ್ರೀ ರಾಮರಾವ್ ಕುಲಕರ್ಣಿ ಸೂಗೂರಿನಲ್ಲಿರುವ ಶ್ರೀ ವಿಷ್ಣುಪ್ರೀಯ ತೀರ್ಥರ ವೃಂದಾವನದ ವ್ಯವಸ್ಥಾಪಕರಾಗಿದ್ದಾರೆ.

ಶ್ರೀಕೃಷ್ಣಾರ್ಪಣಮಸ್ತು

ಲೇಖಕರು : **ಶ್ರೀ ವಿನೋದಕುಮಾರ.ಜಿ. ಕುಲಕರ್ಣಿ** ಕಲಬುರಗಿ .

ಫೋ.ನಂ : 9986849060

* * *